ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **21/2022**

| | | |
|---|---|---|
| ಹೆಸರು | ಎನ್. ಗೋವಿಂದೇಗೌಡ | ಸಿ.ಡಬ್ಲ್ಯೂ **- 10** |
| ತಂದೆಯ ಹೆಸರು | ನಿಂಗೇಗೌಡ | ಪಿ.ಡಬ್ಲ್ಯೂ **- 8** |
| ವಯಸ್ಸು | 54 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ನಿಲುವಾಗಿಲು | |

ಸಾಕ್ಷಿಗೆ ದಿನಾಂಕಃ 25.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ಈಗ ನೋಡುತ್ತಿರುವ ದಾಖಲೆಗಳಿಗೆ ಸುಮಾರು 2-3 ವರ್ಷಗಳ ಹಿಂದೆ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ಯಾವ ಸ್ಥಳದಲ್ಲಿ ಸಹಿ ಮಾಡಿರುತ್ತೆನೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ದಾಖಲೆಗಳು ಅಮಾನತ್ತು ಮಹಜರ್ ಗಳ ನಿಜ ಪ್ರತಿಯಾಗಳಾಗಿದ್ದು, ಅದನ್ನು ನಿಪಿ 9 ರಿಂದ 11 ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಈಗ ನೋಡುತ್ತಿರುವ 08 ಫೋಟೋಗಳಲ್ಲಿ ನನ್ನ ಭಾವಚಿತ್ರ ಇರುತ್ತದೆ. ಸದರಿ ಫೋಟೋಗಳನ್ನು ನಿಪಿ 12 ರಿಂದ 19 ರಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಯಾವ ಉದ್ದೇಶಕ್ಕೆ ತೆಗೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಒಡವೆ ಮತ್ತು ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ

ದಿ: 03.11.2021 ರಂದು ಸುಲುಗೆಯ ಸಂಬಂಧವಾಗಿ ಮದ್ದೂರು ಗ್ರಾಮಾಂತರ ವೃತ್ತ ಕಛೇರಿಯಲ್ಲಿ ನನ್ನ ಮತ್ತು ಚಾಸಾ 11 ರವರ ಸಮಕ್ಷಮ ಪೊಲೀಸರು ಆರೋಪಿಗಳು ಹಾಜರುಪಡಿಸಿದ ಎರಡು ಎಳೆಯ ಒಂದು ಚಿನ್ನದ ಮಾಂಗಲ್ಯ ಸರಕ್ಕೆ ಸಂಬಂಧವಾಗಿ ಮದ್ಯಾಹ್ನ 2-30 ರಿಂದ 3-30 ರ ಸಮಯದಲ್ಲಿ ನಿಪಿ 9 ರಂತೆ ಅಮಾನತ್ತು ಮಹಜರ್ ಮಾಡಿ, ಸದರಿ ಮಾಂಗಲ್ಯ ಸರವನ್ನು ಅಮಾನತ್ತು ಪಡಿಸಿಕೊಂಡು ನಿಪಿ 12 ರಿಂದ 14 ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ.

2. ದಿ: 10.11.2021 ರಂದು ಸುಲುಗೆಯ ಸಂಬಂಧವಾಗಿ ಮದ್ದೂರು ಗ್ರಾಮಾಂತರ ವೃತ್ತ ಕಛೇರಿಯಲ್ಲಿ ನನ್ನ ಮತ್ತು ಚಾಸಾ 11 ರವರ ಸಮಕ್ಷಮ ಪೊಲೀಸರು ಅಕ್ಷಯ ಗೋಲ್ಡ್ ಕಂಪನಿಯವರು ಹಾಜರುಪಡಿಸಿದ ಒಂದು ಚಿನ್ನದ ತಾಳಿ, 02 ಗುಂಡುಗಳು, 02 ಕಾಸು, 02 ಕಿವಿಯ ಗುಂಡುಗಳು, 02 ಕಿವಿಯ ಸೈಡ್ ಬಟನ್‌ಗಳ ಸಂಬಂಧವಾಗಿ ಮದ್ಯಾಹ್ನ 1-45 ರಿಂದ 2-45 ರ ಸಮಯದಲ್ಲಿ ನಿಪಿ 10 ರಂತೆ ಅಮಾನತ್ತು ಮಹಜರ್ ಮಾಡಿ, ಸದರಿ ಒಡವೆಳನ್ನು ಅಮಾನತ್ತು ಪಡಿಸಿಕೊಂಡು ನಿಪಿ 15 ರಿಂದ 17 ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ.

3. ಅದೇ ದಿನ ಸುಲುಗೆಯ ಸಂಬಂಧವಾಗಿ ಮದ್ದೂರು ಗ್ರಾಮಾಂತರ ವೃತ್ತ ಕಛೇರಿಯಲ್ಲಿ ನನ್ನ ಮತ್ತು ಚಾಸಾ 11 ರವರ ಸಮಕ್ಷಮ ಪೊಲೀಸರು ಕುಮಾರ್ ಎಂಬುವವರು ಹಾಜರುಪಡಿಸಿದ ಮೋಟಾರ್ ಸೈಕಲ್ ಸಂಬಂಧವಾಗಿ ಮದ್ಯಾಹ್ನ 3-30 ರಿಂದ 4-15 ರ ಸಮಯದಲ್ಲಿ ನಿಪಿ 11 ರಂತೆ ಅಮಾನತ್ತು ಮಹಜರ್ ಮಾಡಿ, ಸದರಿ ವಾಹನವನ್ನು ಅಮಾನತ್ತು ಪಡಿಸಿಕೊಂಡು ನಿಪಿ 18 ಮತ್ತು 19 ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಈಗ ಓದಿ ಹೇಳಲಾದಂತೆ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ 20 ಎಂದು ಗುರುತಿಸಲಾಯಿತು. ಎಲ್ಲಾ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃಆರೋಪಿ ಪರ: ವಕೀಲರಿಂದ

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.